# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 640/2016 ಸಿಡಬ್ಲೂ: 1 ಪಿಡಬ್ಲೂ: 1

ಪ್ರಮಾಣವಚನ ಬೋಧಿಸಲಾಯಿತು ದಿಃ 06-11-2025

ಹೆಸರು : ಯಲ್ಲಾಲಿಂಗ

ತಂದೆ ಹೆಸರು : ಮಲ್ಲಪ್ಪ

ವಯಸ್ಸು : 32 ವರ್ಷ

ಉದ್ಯೋಗ : ಒಕ್ಕಲುತನ

ವಾಸಸ್ಥಳ : ತೆಲಕೂರು

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾ ಸಾ 4 ಮತ್ತು 6 ನನ್ನ ತಾಯಿ ಮತ್ತು ತಂದೆ. ಚಾ ಸಾ 5 ನನ್ನ ಊರಿನವರು. ಚಾ ಸಾ 7 ನನ್ನ ತಮ್ಮ. ಆರೋಪಿತರು ಪರಿಚಯ. ದಿ.09-03-2016 ರಂದು ಬೆಳಿಗ್ಗೆ 06-00 ಗಂಟೆ ಸುಮಾರಿಗೆ ನಾನು ಮತ್ತು ಚಾ ಸಾ 4, 6 ಮತ್ತು 7 ನಮ್ಮ ಮನೆಯಲ್ಲಿ ಕುಳಿತುಕೊಂಡಾಗ ಆರೋಪಿತರೆಲ್ಲಾರೂ ಬಂದು ನಮಗೆ ರಂಡಿ ಮಗನೆ, ಸೂಳೆ ಮಗನೆ ಅಂತಾ ಅವಾಚ್ಯವಾಗಿ ಬೈಯುತ್ತಿದ್ದರು. ಆಗ ನಾವು ಸುಮ್ಮ ಸುಮನೆ ನಮಗೆ ಯಾಕೆ ಬೈಯುತಿದ್ದೀಯಾ ಅಂತಾ ಕೇಳಿದಕ್ಕೆ ಆಗ 2 ನೇ ಆರೋಪಿತನು ನನಗೆ ಎದುರು ಮಾತನಾಡುತ್ತೀ ಸೂಳೆ ಮಗನೆ ನಿನಗೆ ಸಾಯಿಸುಬಿಡುತ್ತೇನೆ ಎಂದು ಹೇಳಿದನು. ಅದೇ ರೀತಿ ಅಲ್ಲೆ ಬಿದ್ದ ಒಂದು ಕಟಿಗೆಯನ್ನು ತೆಗೆದುಕೊಂಡು ನನ್ನ ತಲೆಗೆ ಹೊಡೆದನು. ಆಗ 1 ನೇ ಆರೋಪಿತನು ಕಲ್ಲಿನಿಂದ ನನ್ನ ಬೆನ್ನಿನಲ್ಲಿ ಮತ್ತು ತಲೆಗೆ ಹೊಡೆದಿರುತ್ತಾನೆ. ಅಷ್ಟರಲ್ಲಿ 3 ನೇ ಆರೋಪಿತನು ಬಂದು ಕೈಯಿಂದ ಮುಖಕ್ಕೆ ಹೊಡೆದಿರುತ್ತಾನೆ. ಅದೇ ರೀತಿ ಚಾ ಸಾ 4 ಮತ್ತು 5 ರವರು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು ಮತ್ತು ಈ ಸೂಳೆ ಮಕ್ಕಳದು ಬಹಳಾ ಆಗಿದೆ ಸಾಯಿಸಿ ಬಿಡಿರಿ ಅಂತಾ ಹೇಳಿದರು. ಆಗ ಚಾ ಸಾ 6 ಮತ್ತು 7 ರವರು ಮನೆಯಿಂದ ಹೊರಗಡೆ ಬಂದಿದ್ದರು. ಆಗ 3 ನೇ ಆರೋಪಿತನು ಚಾ ಸಾ 7 ರವರಿಗೆ ಕೈಯಿಂದ ಹೊಡೆದಿದ್ದನು. ಅದೇ ರೀತಿ 1 ನೇ ಆರೋಪಿತನು ಚಾ ಸಾ 4 ರವರಿಗೆ ಕಲ್ಲಿನಿಂದ ಹೊಡೆದನು. ಆಗ 1 ನೇ ಆರೋಪಿತನು ನನ್ನ ತಾಯಿಯ ಸೀರೆ ಮತ್ತು ಕುಪ್ಪಸವನ್ನು ಹಿಡಿದುಕೊಂಡು ಎಳೆದಾಡಿದನು. ಜಗಳ ಆದಾಗ ನಮ್ಮ ತಲೆಯಿಂದ ರಕ್ತ ಸೋರುತ್ತಿರುವುದರಿಂದ ನನ್ನ ಮೈಯಲ್ಲಿ ಎಲ್ಲಾ ರಕ್ತ ಆಗಿತ್ತು. ಸಾಕ್ಷಿಯು ರಕ್ತ ಬಿದ್ದಿದ್ದ ಅಂಗಿಯನ್ನು ಮತ್ತು ಪ್ಯಾಂಟ್‌ನ್ನು ತೋರಿಸಿರುತ್ತಾರೆ. ಆಗ

ಚಾ ಸಾ 5 ರವರು ಬಂದು ಜಗಳ ಬಿಡಿಸಿದರು. ನಂತರ ನಾವು ಸೇಡಂ ಪೊಲೀಸ್ ಠಾಣೆಗೆ ಬಂದಿದ್ದೆವು. ಆಗ ಪೋಲೀಸರು ನಮ್ಮನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಆರೋಪಿತರ ವಿರುದ್ದ ಪ್ರಕರಣವನ್ನು ದಾಖಲಿಸಿಕೊಂಡಿರುತ್ತಾರೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ದೂರಾಗಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿರುವುದರಿಂದ ಅದನ್ನು ನಿ ಪಿ 1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿ ಪಿ 1(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಗೆ ಒಂದು ಕಲ್ಲು ಮತ್ತು ಬಡಿಗೆಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಇದರಿಂದ ನಮಗೆ ಹೊಡೆದಿರುತ್ತಾರೆ ಎಯಿ ಒಪ್ಪಿ ಕೊಂಡಿರುವುದರಿಂದ ಅದನ್ನು ಮು ಮಾ 1 ಮತ್ತು 2 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದ:

ಆರೋಪಿ ಪರ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು ಆದರೆ ಯಾವುದೇ ಸಮಂಜಸ ಕಾರಣನೀಡದೆ ಇರುವುದರಿಂದ ಆರೋಪಿ ಪರ ವಿನಂತಿಯನ್ನು ತಲಳ್ಳಿ ಹಾಕಿ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**